ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ. ಮೈಸೂರು.

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ ನಂ : 2429012 & 2428383 E-Mail deo.mysore@gmail.com

ಸಂಖ್ಯೆ : MYSDC-EST2/VA(15)/2/2017 E- 1998 ದಿನಾಂಕ: 08/01/2018

## ಅಧಿಕೃತ ಜ್ಞಾಪನ

ವಿಷಯ: 2016-17 ನೇ ಸಾಲಿನಲ್ಲಿ ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ನೇಮಕಾತಿ ಸಂಬಂಧ ಮೂಲ ದಾಖಲಾತಿಗಳನ್ನು ಪರಿಶೀಲಿಸಿದ್ದು, ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:1) ಈ ಕಛೇರಿಯ ಅಧಿಸೂಚನೆ ಸಂಖ್ಯೆ ವಿಎ ಇ.ಎಸ್.ಟಿ 84/2016-17 ದಿನಾಂಕ: 06/12/2016

2) ಈ ಕಛೇರಿಯ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿ:22/08/2017, 04/07/2017 ಮತ್ತು 20/12/2017

****

ಮೈಸೂರು ಜಿಲ್ಲಾ ಕಂದಾಯ ಘಟಕದ ವಿವಿಧ ತಾಲ್ಲೂಕುಗಳಲ್ಲಿ ಗ್ರೂಪ್ ಸಿ ವೃಂದದ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು, ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಉಲ್ಲೇಖ (1) ರಂತೆ ಆಹ್ವಾನಿಸಲಾಗಿತ್ತು.

ಉಲ್ಲೇಖ (2) ರ ಅಧಿಕೃತ ಜ್ಞಾಪನದಲ್ಲಿ ಒಟ್ಟು 105 ಹುದ್ದೆಗಳಿಗೆ ಅನುಗುಣವಾಗಿ 1 : 5 ಅನುಪಾತದಲ್ಲಿ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ವಯ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಪಟ್ಟಿಗಳನ್ನು ಅನುಬಂಧಗಳಲ್ಲಿ ಉಲ್ಲೇಖ (2) ರ ದಿನಾಂಕ: 04/07/2017 ರಂದು ಪ್ರಕಟಿಸಲಾಗಿದೆ. ಸಮತಳ ಮೀಸಲಾತಿ ರೀತ್ಯಾ ಮಾಜಿ ಸೈನಿಕ ಕೋಟಾ, ಕನ್ನಡ ಮಾಧ್ಯಮ ಕೋಟಾ, ಅಂಗವಿಕಲ (ಶ್ರವಣ ದೋಷ) ಕೋಟಾ, ಮಹಿಳಾ ಕೋಟಾದಡಿ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಕಾರಣ ಮುಂದಿನ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಯನ್ನು ಪರಿಶೀಲಿಸಿ, ಪರಿಶೀಲನಾ ಕಾರ್ಯ ಪೂರ್ಣಗೊಂಡಿರುತ್ತದೆ.

ಅದರಂತೆ ಈ ಕೆಳಕಂಡಂತೆ ಸಮತಳ ಮೀಸಲಾತಿಯ ಮಾಜಿ ಸೈನಿಕ ಕೋಟಾ, ಕನ್ನಡ ಮಾಧ್ಯಮ ಕೋಟಾ, ಅಂಗವಿಕಲ (ಶ್ರವಣ ದೋಷ) ಕೋಟಾ, ಮಹಿಳಾ ಕೋಟಾದ ಹೆಚ್ಚುವರಿ ಅಭ್ಯರ್ಥಿಗಳ ಮಾಹಿತಿಯನ್ನು ಅನುಬಂಧಗಳಲ್ಲಿ ಪ್ರಕಟಿಸಲಾಗಿದೆ.

1. ಮೂಲ ದಾಖಲಾತಿಗಳನ್ನು ಪರಿಶೀಲಿಸಲು ನಿಗಧಿತ ದಿನಾಂಕದಂದು ಹಾಜರಾಗದೆ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿ ಅನುಬಂಧ- 1 ಎ ರಲ್ಲಿ ಪ್ರಕಟಿಸಲಾಗಿದೆ.
2. ಮೂಲ ದಾಖಲಾತಿಗಳನ್ನು ಪರಿಶೀಲಿಸಲು ನಿಗಧಿತ ದಿನಾಂಕದಂದು ಹಾಜರಾಗಿ ಅಗತ್ಯವಿರುವ ದಾಖಲಾತಿಗಳನ್ನು ಹಾಜರುಪಡಿಸದ ಕಾರಣ ಸಂಬಂಧಪಟ್ಟ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿ ಅನುಬಂಧ- 1 ಬಿ ರಲ್ಲಿ ಪ್ರಕಟಿಸಲಾಗಿದೆ.

3. ಮೂಲ ದಾಖಲಾತಿಗಳನ್ನು ಪರಿಶೀಲಿಸಲು ನಿಗಧಿತ ದಿನಾಂಕದಂದು ಹಾಜರಾಗಿ ನಿಗಧಿತ ದಾಖಲಾತಿಗಳನ್ನು ಹಾಜರುಪಡಿಸದೆ ಇರುವ ಕಾರಣ ಅಂತಹ ದಾಖಲಾತಿಗಳ ರೋಸ್ಟರ್ ಹಾಗೂ ಸಮತಳ ಮೀಸಲಾತಿಯನ್ನು ರದ್ದುಪಡಿಸಿ ಅನುಬಂಧ-2 ರಲ್ಲಿ ಪ್ರಕಟಿಸಲಾಗಿದೆ.
4. ಮೂಲ ದಾಖಲಾತಿಗಳನ್ನು ಪರಿಶೀಲಿಸಲು ನಿಗಧಿತ ದಿನಾಂಕದಂದು ಹಾಜರಾಗಿ ಅಗತ್ಯವಿರುವ ದಾಖಲಾತಿಗಳನ್ನು ಹಾಜರುಪಡಿಸಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಮುಂದಿನ ಪ್ರಕ್ರಿಯೆಗೆ ಪರಿಗಣಿಸಿ ಅನುಬಂಧ-3 ರಲ್ಲಿ ಪ್ರಕಟಿಸಲಾಗಿದೆ.

ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ,
ಮತ್ತು ಜಿಲ್ಲಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು.

ಪ್ರತಿಯನ್ನು: ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ/ಕಳುಹಿಸಿದೆ.

1. ರಾಷ್ಟ್ರೀಯ ಸೂಚನಾ ವಿಜ್ಞಾನಾಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಸದರಿ ಅಧಿಕೃತ ಜ್ಞಾಪನ ಹಾಗೂ ಪಟ್ಟಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
2. ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು/ತಹಸೀಲ್ದಾರರುಗಳಿಗೆ ಕಳುಹಿಸುತ್ತಾ ಅಧಿಸೂಚನೆಯನ್ನು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
3. ಈ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.